6. ಪ್ರೇಕ್ಷಕರಿಗೆ ಕುಡಿಯುವ ನೀರಿನ ಸರಬರಾಜು ಹಾಗೂ ಹುಲ್ಲು ಹಾಸಿಗೆಯ ನಿರ್ವಹಣೆಗಾಗಿ ತೆರೆದ ಬಾವಿಯನ್ನು ತೋಡಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ಮೇಲೆ ವಿವರಿಸಿದ ಕಾಮಗಾರಿಗಳಿಗೆ ಒಟ್ಟು 7.89 ಲಕ್ಷರೂಪಾಯಿಗಳನ್ನು (ಸಾಮಾನ್ಯ ನಿರ್ವಹಣೆ ಹೊರತುಪಡಿಸಿ) ಖರ್ಚು ಮಾಡಲಾಗಿದೆ.

ಆ) ಹೌದು

ಇ) ನಿಗದಿಪಡಿಸಿದ ಹಣ ರೂ.9.05 ಲಕ್ಷಗಳು ಈ ಪುತ್ಥಳಿಯನ್ನು ಕೆಳದಿಯ ಸರ್ಕಲ್ ಹತ್ತಿರವಿರುವ ಪಂಚಾಯತಿ ಕಾರ್ಯಾಲಯದ ಎದುರು ಭಾಗದಲ್ಲಿ ಸ್ಥಾಪಿಸಲು ಯೋಜಿಸಲಾಗಿದೆ.

ಈ) ಪುತ್ಥಳಿ ನಿರ್ಮಾಣದ ಸ್ಥಳದ ಸುತ್ತ 60 ಮೀಟರ್ ಉದ್ದ 30 ಮೀಟರ್ ಅಗಲ ಗೋಡೆ ಕಾಮಗಾರಿ ಪ್ರಗತಿಯಲ್ಲಿದೆ.

ಉ) 2005ರ ಜೂನ್ ಅಂತ್ಯದ ವೇಳೆಗೆ ಮುಗಿಸುವ ಅಂದಾಜಿದೆ.

ಊ) ಪ್ರತಿಮೆಗಾಗಿ ರೂ.5.00 ಲಕ್ಷ ವೆಚ್ಚವಾಗುವ ಸಾಧ್ಯತೆ ಇರುತ್ತದೆ.

ಋ) ಪ್ರಶ್ನೆಗ 'ಅ' ರಲ್ಲಿ ಉತ್ತರಿಸಿದಂತೆ.

934(1029)ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ(ಕುಂದಾಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಂದಾಪುರ ತಾಲ್ಲೂಕು ಅಸೋಡ ಜಾತ್ರೆಯ ಸಮಯದಲ್ಲಿ ಸೂಜಿ ಚುಚ್ಚಿದ ಪ್ರಕರಣದಲ್ಲಿ ಅಮಾಯಕರ ಮೇಲೆ ಉದ್ದೇಶ ಪೂರ್ವಕವಾಗಿ ಸುಳ್ಳು ಮೊಕದ್ದಮೆಗಳನ್ನು ದಾಖಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಎಷ್ಟು ಜನರ ಮೇಲೆ ಕೇಸು ದಾಖಲು ಮಾಡಲಾಗಿದೆ;

ಇ) ಎಷ್ಟು ಜನರನ್ನು ಬಂದಿಸಲಾಗಿದೆ;

ಈ) ಅಮಾಯಕರ ಮೇಲೆ ಹಾಕಿದ ಕೇಸನ್ನು ಸರ್ಕಾರ ಹಿಂದಕ್ಕೆ ಪಡೆಯಲು ತೀರ್ಮಾನಿಸಿದೆಯೇ;

ಉ) ಸದರಿ ಪ್ರಕರಣ ವಿಚಾರಣೆ ಯಾವ ಹಂತದಲ್ಲಿದೆ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಈ ಘಟನೆಗೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಮಾತ್ರ ಪ್ರಕರಣಗಳು ದಾಖಲಾಗಿದ್ದು, ಅಮಾಯಕರ ಮೇಲೆ ಉದ್ದೇಶ ಪೂರ್ವಕವಾಗಿ ಯಾವುದೇ ಸುಳ್ಳು ಮೊಕದ್ದಮೆಗಳನ್ನು ದಾಖಲಿಸಿರುವುದಿಲ್ಲ.

ಆ) ಈ ಸಂಬಂಧದಲ್ಲಿ 147 ಜನರ ವಿರುದ್ಧ ಪ್ರಕರಣಗಳು ದಾಖಲಾಗಿವೆ.

ಇ) ಇದುವರೆಗೂ 22 ಜನರನ್ನು ಮಾತ್ರ ಬಂದಿಸಲಾಗಿದೆ.

ಈ) ಉಪ ಪ್ರಶ್ನೆ 'ಅ' ಭಾಗದ ಉತ್ತರದಿಂದ ಉದ್ಭವಿಸುವುದಿಲ್ಲ.

ಉ) ಈ ಘಟನೆಗೆ ಸಂಬಂಧಿಸಿದಂತೆ ಒಟ್ಟು 82 ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ 2 ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ 2 ಪ್ರಕರಣಗಳು ನ್ಯಾಯಾಲಯದಲ್ಲಿ ಖುಲಾಸೆ ಗೊಂಡಿರುತ್ತವೆ. ಉಳಿದ 80 ಪ್ರಕರಣಗಳು ನ್ಯಾಯಾಲಯದಲ್ಲಿ ಸಾಕ್ಷಿಗಳ ವಿಚಾರಣೆ ಹಂತದಲ್ಲಿರುತ್ತವೆ.